ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,
ಬೇಲೂರು

ಸಿ.ಸಿ. ನಂ: **468/2019**

ಪಿರ್ಯಾದಿ : ಬಿ.ಎನ್. ದಿವಾಕರ್
ಬಿನ್: ನಾಗರಾಜ್,
**32** ವರ್ಷ, ಎನ್. ನಿಡಗೋಡು ಗ್ರಾಮ,
ಕಸಬಾ ಹೋಬಳಿ,
ಬೇಲೂರು ತಾಲ್ಲೂಕು, ಹಾಸನ ಜಿಲ್ಲೆ.

ವಿರುದ್ಧ

ಆರೋಪಿ : ನಿಂಗಪ್ಪ ಅಡಿವಕ್ಕನವರ್
ಶಿಕ್ಷಕರು, ವಿಶ್ವ ಪ್ರೌಢಶಾಲೆ,
ಬಿಕ್ಕೋಡು ರಸ್ತೆ, ಬೇಲೂರು ಟೌನ್,
ಬೇಲೂರು ತಾಲ್ಲೂಕು, ಹಾಸನ ಜಿಲ್ಲೆ.

**: ಆರೋಪಣೆಯ ಸಾರಾಂಶ :**

ಪಿರ್ಯಾದಿ ಮತ್ತು ಆರೋಪಿಯಾದ ನೀನು ತುಂಬಾ ಪರಿಚಯದವರಾಗಿದ್ದು, ಆರೋಪಿಯಾದ ನೀನು ದಿನಾಂಕ: 06.10.2018 ರಂದು ಪಿರ್ಯಾದಿ ಮನೆಗೆ ಬಂದು ತನಗೆ ತುರ್ತಾಗಿ ತನ್ನ ವ್ಯವಹಾರಕ್ಕೆ ಹಾಗೂ ಕೈಸಾಲ ತೀರಿಸುವ ಸಲುವಾಗಿ ತುರ್ತಾಗಿ ರೂ.2,00,000/- ಗಳ ಅವಶ್ಯಕತೆ ಕೊಡಿ, ಸದರಿ ಹಣವನ್ನು ಎರಡು ತಿಂಗಳಲ್ಲಿ ವಾಪಸ್ ಕೊಡುತ್ತೇನೆಂದು ಕೇಳಿಕೊಂಡಾಗ, ಪಿರ್ಯಾದಿಯು ಆರೋಪಿಯಾದ ನಿನ್ನ ಮೇಲೆಟ್ಟಿದ್ದ ವಿಶ್ವಾಸದಿಂದ ಅಂದೇ ರೂ.2,00,000/- ಗಳನ್ನು ಆರೋಪಿಯಾದ ನಿನಗೆ ನಗದಾಗಿ ನೀಡಿದ್ದು, ಸದರಿ ಹಣದ ಆಧಾರವಾಗಿ ಅದೇ ದಿನ ಆರೋಪಿಯಾದ ನಿನ್ನ ಬ್ಯಾಂಕ್ ಆದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ,, ಬೇಲೂರು ಶಾಖೆಯ ಚೆಕ್ ನಂ:192823ನ್ನು ರೂ.2,00,000/-ಗಳನ್ನು ನಮೂದಿಸಿ, ದಿನಾಂಕ: 06.12.2018 ರಂದು ಅಥವಾ ನಂತರ ನಗಧೀಕಸಿಕೊಳ್ಳುವಂತೆ ಚೆಕ್ಕನ್ನು ನೀಡಿರುತ್ತಾರೆ. ಆದ್ದರಿಂದ ಪಿರ್ಯಾದುದಾರನು ಸದರಿ ಚೆಕ್‌ನ್ನು ನಗಧೀಕರಿಸುವ ಸಲುವಾಗಿ ದಿನಾಂಕ: 06.12.2018 ರಂದು ಪಿರ್ಯಾದುದಾರನ ಬ್ಯಾಂಕ್ ಆದ ಕರ್ನಾಟಕ ಬ್ಯಾಂಕ್, ಬೇಲೂರು ಶಾಖೆಯ ಮೂಲಕ ಆರೋಪಿಯಾದ ನಿನ್ನ ಬ್ಯಾಂಕಿಗೆ ಕಳುಹಿಸಿದಾಗ, ಸದರಿ ಬ್ಯಾಂಕ್ ನವರು ಆರೋಪಿಯ ಖಾತೆಯನ್ನು ಪರಿಶೀಲಿಸಿದಾಗ, ಆರೋಪಿಯಾದ ನಿನ್ನ

ಖಾತೆಯಲ್ಲಿ ಚೆಕ್ ಮಾನ್ಯ ಮಾಡುವಷ್ಟು ಹಣ ಇಲ್ಲವೆಂದು ಹಿಂಬರಹವನ್ನು ದಿನಾಂಕಃ 10.12.2018 ರಂದು ಚೆಕ್ ನೊಂದಿಗೆ ಪಿರ್ಯಾದಿ ಬ್ಯಾಂಕಿಗೆ ಕಳುಹಿಸಿದ್ದು, ಸದರಿ ಚೆಕ್ ಹಾಗೂ ಹಿಂಬರಹವನ್ನು ಪಿರ್ಯಾದಿ ಬ್ಯಾಂಕ್ ನವರು ವಾಪಸ್ ಪಿರ್ಯಾದುದಾರನಿಗೆ ನೀಡಿದ್ದು, ನಂತರ ಪಿರ್ಯಾದಿಯು ಆರೋಪಿಯಾದ ನಿನ್ನನ್ನು ಭೇಟಿಯಾಗಿ ಸದರಿ ವಿಚಾರವನ್ನು ತಿಳಿಸಿ ಸಾಲದ ಹಣವನ್ನು ಮರುಪಾವತಿಸುವಂತೆ ಕೇಳಲಾಗಿ ಆರೋಪಿಯಾದ ನೀನು ಪಿರ್ಯಾದಿಗೆ ಉಢಾಫೆ ಉತ್ತರ ನೀಡಿರುತ್ತಾರೆ. ತದನಂತರ ಪಿರ್ಯಾದುದಾರರು ತಮ್ಮ ವಕೀಲರ ಮೂಲಕ ದಿನಾಂಕಃ19.12.2018 ರಂದು ನೊಂದಾಯಿತ ಅಂಚೆ ಮೂಲಕ ತಿಳುವಳಿಕೆ ನೋಟಿಸನ್ನು ಕಳುಹಿಸಿದಾಗ, ಸದರಿ ನೋಟಿಸ್ ಆರೋಪಿಯಾದ ನಿನಗೆ ದಿನಾಂಕಃ 27.12.2018 ರಂದು ಜಾರಿಯಾಗಿದ್ದರೂ ಕೂಡ ಆರೋಪಿಯಾದ ನೀನು ಇದೂವರೆಗೂ ಯಾವುದೇ ಉತ್ತರವನ್ನಾಗಲೀ, ಹಣವನ್ನಾಗಲೀ ಪಿರ್ಯಾದುದಾರನಿಗೆ ನೀಡಿರುವುದಿಲ್ಲ. ಆರೋಪಿಯಾದ ನೀನು ಪಿರ್ಯಾದುದಾರರಿಂದ ಸಾಲವಾಗಿ ಪಡೆದ ಹಣವನ್ನು ನೀಡದೇ, ಮೋಸ ಮಾಡುವ ಉದ್ದೇಶದಿಂದ ಚೆಕನ್ನು ನೀಡಿ ವರ್ಗಾವಣೆಗೊಳ್ಳಬಲ್ಲ ದಸ್ತಾವೇಜುಗಳ ಅಧಿನಿಯಮ ಪ್ರಕರಣ 138 ಸಹವಾಚಕ 142 ರಂತೆ ಅಪರಾಧವನ್ನು ಎಸಗಿರುತ್ತೀಯಾ ಅಂತ ಪಿರ್ಯಾದಿ ಆರೋಪಿಸಿರುತ್ತಾನೆ.

ಪ್ರಶ್ನೆಃ ಈಗ ನಿನಗೆ ಓದಿ ಹೇಳಿ ವಿವರಿಸಿದ ಆರೋಪದ ಅಂಶಗಳು ಅರ್ಥವಾಯಿತೇ?

ಉತ್ತರಃ

ಪ್ರಶ್ನೆಃ ನೀನು ಆರೋಪವನ್ನು ಒಪ್ಪುವೆಯೋ ಅಥವಾ ವಿಚಾರಣೆಯಾಗಬೇಕೋ?

ಉತ್ತರಃ

(ಆಪಾದಿತನಿಗೆ ಆರೋಪದ ಅಂಶವನ್ನು ಓದಿ ಹೇಳಿ ವಿವರಿಸಿದ ಮೇಲೆ ಆತನು ಮೇಲ್ಕಂಡಂತೆ ನೀಡಿದ ಉತ್ತರವನ್ನು ಸ್ವಹಸ್ತಾಕ್ಷರದಿಂದ ಮುಕ್ತ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಗಿದೆ ಎಂದು ದೃಢೀಕರಿಸಲಾಗಿದೆ.)

ಸ್ಥಳ ಃ ಬೇಲೂರು
ದಿನಾಂಕಃ 23.10.2024.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಬೇಲೂರು..